of the honest efforts for want of facility of New Sugar Factory. Hence it needs immediate attention.

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಸಚಿವರು),—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಹಾಗೆ, ಇಲ್ಲಿ ಸಕ್ಕರೆ ಕಾರ್ಖಾನೆ ಮಾಡಬೇಕೆಂದು ಹೇಳಿ ಅಲ್ಪಸ್ವಲ್ಪ ಷೇರು ಹಣವನ್ನೂ ವಸೂಲಿ ಮಾಡಿದ್ದಾರೆ. ಸರಕಾರದವರು ಇದಕ್ಕೆ ಇನ್ನೂ ಅನುಮತಿ ಕೊಟ್ಟಿಲ್ಲ. ಈಗ ಇರುವ ಹೊಸ ನೀತಿಯ ಪ್ರಕಾರ ಇದನ್ನು ಸರಕಾರಿ ರಂಗದಲ್ಲಿ ಮಾಡಬೇಕೋ ಅಥವಾ ಇದನ್ನು ಬೇರೆ ಜಾಯಿಂಟ್ ಕಮಿಟಿಗಳಿಗೆ ವಹಿಸಬೇಕೋ ಎಂದು ಯೋಚನೆ ಮಾಡುತ್ತಿದ್ದೇವೆ. ಇದರ ಬಗ್ಗೆ ತೀರ್ಮಾನ ತೆಗೆದುಕೊಂಡ ಮೇಲೆ ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಶ್ರೀ ಪಂಪಾಪತಿ ಆಬ್ಸೆಂಟ್.

ಶ್ರೀ ಬಿ. ಲಕ್ಕಪ್ಪನವರೇ ನೀವು ಓದಿ.

(೨) ಬೆಂಗಳೂರಿನ ಅಭಿವೃದ್ಧಿ ಪ್ರಾಧಿಕಾರದವರಿಂದ ನಿವೇಶನಗಳನ್ನು ಹಂಚುವುದು

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕಳೆದ ಐದು ವರ್ಷಗಳಿಂದ ಈವರೆಗೆ ಅರ್ಜಿಗಳನ್ನು ಕರೆದು ಪರಿಶೀಲಿಸಿ ನಿವೇಶನಗಳನ್ನು ಎಷ್ಟು ಮಂದಿಗೆ ನೀಡಿದ್ದಾರೆ. ನಿವೇಶನಗಳನ್ನು ಹಂಚಲು ಪ್ರಾಧಿಕಾರದವರು ರೂಪಿಸಿರುವ ನೀತಿನಿಯಮಗಳೇನು ? ಸುಮಾರು ಏಳೆಂಟು ಬಾರಿ ಅರ್ಜಿ ಸಲ್ಲಿಸಿದ್ದರೂ ಕೂಡಾ ನಿವೇಶನ ಪಡೆದು ಕೊಳ್ಳಲು ಸಾಧ್ಯವಾಗದಿರುವುದಕ್ಕೆ ಕಾರಣಗಳೇನು ? ಯಾವ ಯಾವ ವರ್ಗದ ಜನರಿಗೆ ಯಾವ ಯಾವ ಆಳತೆಗೋಲುಗಳನ್ನು ಉಪಯೋಗಿಸುತ್ತಾರೆ. ಏಳು ಬಾರಿ ಅರ್ಜಿ ಹಾಕಿದವರಿಗೆ ನಿವೇಶನ ದೊರೆಯದ ಸಂದರ್ಭದಲ್ಲಿ ಪ್ರಥಮಬಾರಿಗೆ ಅರ್ಜಿ ಹಾಕಿದವರಿಗೆ ನಿವೇಶನ ದೊರೆತಿರುವಂತಹ ಸಂಧರ್ಭಗಳಲ್ಲಿ ಯಾವ ಆಳತೆಗೋಲು ಉಪಯೋಗಿಸಿದ್ದಾರೆ ? ಈ ರೀತಿಯ ಪ್ರಾಧಿಕಾರದ ಧೋರಣೆಯಿಂದಾಗ ಸಾರ್ವಜನಿಕರಿಗಾಗುತ್ತಿರುವ ತೊಂದರೆಯನ್ನು ಸರಕಾರದವರು ಮನಗಂಡಿದ್ದಾರೆಯೇ ? ಇದೆಲ್ಲದಕ್ಕೂ ಸಂಬಂಧಪಟ್ಟ ಮಂತ್ರಿಗಳು ಸದನಕ್ಕೆ ಹೇಳಿಕೆ ನೀಡಬೇಕೆಂದು ಈ ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ನಿವೇಶನಗಳನ್ನು ಹಂಚಿಕೆಗಾಗಿ ನಿಯಮಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಈಗ ಪ್ರಸಿದ್ಧಪಡಿಸಿದ್ದಾರೆ, ಮತ್ತು ಪ್ರಚುರಪಡಿಸಿದ್ದಾರೆ. ಅದರ ಪ್ರಕಾರ ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹಂಚುತ್ತಿದ್ದಾರೆ. ಕೆಲವರಿಗೆ ಬೇಗ ಸಿಕ್ಕಿದೆ, ಕೆಲವರಿಗೆ ವಿಧಾನವಾಗಿ ಸಿಗುತ್ತಿದೆ ಎಂಬ ಮಾತನ್ನು ಹೇಳಿದ್ದಾರೆ. ಅಂಥದ್ದು ಯಾವುದಾದರೂ ಸ್ಪೆಸಿಫಿಕ್ ಆಗಿದ್ದರೆ, ನನಗೆ ಅದನ್ನು ತಾವು ತಿಳಿಸಿದ್ದೇ ಆದರೆ, ಅದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರ ಗಮನಕ್ಕೆ ತಂದು ಅವರಿಗೆ ನ್ಯಾಯ ಕೊಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂಬ ಮಾತನ್ನು ಹೇಳುತ್ತೇನೆ.

(೩) ಬೆಂಗಳೂರು ಅರಮನೆಯ ಆವರಣದಲ್ಲಿ ನಡೆದ ಜಿಲ್ಲಾ ಪರಿಷತ್ ಸಮಾವೇಶದಲ್ಲಿ ಆಹಾರದ ಪೊಟ್ಟಣಗಳನ್ನು ಒದಗಿಸಿರುವವರಿಂದ ಮೋಸ ಹಾಗಿರುವುದು

ಶ್ರೀ ಆರ್. ವೆಂಕಟರಾಮಯ್ಯ (ಮುಳುಬಾಗಿಲ್).—ಮಾನ್ಯ ಅಧ್ಯಕ್ಷರೇ, ೩೧-೧-೮೭ ರಂದು ಬೆಂಗಳೂರು ಅರಮನೆ ಆವರಣದಲ್ಲಿ ಜಿಲ್ಲಾ ಪರಿಷತ್, ಮಂಡಲ ಪಂಚಾಯತ್ ಸದಸ್ಯರು, ಶಾಸಕರು, ಮತ್ತು ಪಾರ್ಲಿಮೆಂಟ್ ಸದಸ್ಯರ ಬೃಹತ್ ಸಮಾವೇಶವನ್ನು ಸರಕಾರದ ವತಿಯಿಂದ ಮಾಡಿ, ೯೦ ಕೌಂಟರ್‌ಗಳಲ್ಲಿ ಊಟದ ವಿಪರ್ಯಾಸ ಮಾಡಿ ಈ ಊಟದ ವ್ಯವಸ್ಥೆಗೊಸ್ಕರ "ಫುಡ್ ಪ್ಯಾಕೆಟ್ ಗಳನ್ನು " ಕೊಡುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ರೀತಿ ೬೫,೦೦೦ ಫುಡ್ ಪ್ಯಾಕೆಟ್‌ಗಳನ್ನು ಕೊಡಲು ಒಂದು ೧೨,೦೦ ರೂಪಾಯಿಗಳಂತೆ ಕೊಟ್ಟಿದ್ದು. ಆದು ೬.೦೦ ರೂಪಾಯಿಗಳನ್ನು ಕೊಡಲು ಯೋಗ್ಯವಿರಲಿಲ್ಲ. ಅಲ್ಲಿ ೫೦,೦೦೦ ಪ್ಯಾಕೆಟ್‌ಗಳು ಮಾತ್ರ ಮಧ್ಯಾಹ್ನ ೨ ಗಂಟೆಯವರೆಗೆ ಹಂಚಲು ಸರಬರಾಜಾಯಿತು. ಆಹಾರ ಒದಗಿಸದೇ ಹೋದುದಕ್ಕೆ, ದರಿದ್ರ ಅನೇಕ ಆಹ್ವಾನಿತರು ಕೋಪೋದ್ರೇಕದಿಂದ ಶಾಂತಿ ಭಂಗವಾಗುವ ಪರಿಸ್ಥಿತಿಗೆ ಹೋಗಿ, ಪೋಲೀಸರು ಮಧ್ಯೆ ಪ್ರವೇಶಿಸಿ ಅಲ್ಲಿದ್ದ

ಒಂದು ಎರಡು ಲಾರಿಗಳನ್ನು ಅಲ್ಲಿ ಸೇರಿದ್ದವರು ಮುತ್ತಿಗೆ ಹಾಕಿದಾಗ ಲಘುವಾಗಿ ಲಾಠಿ ಪ್ರಯೋಗ ಮಾಡಿದರು. ಇದು ತುಮಕೂರು, ಕೋಲಾರ ಕ್ಯಾಂಪ್ ಹತ್ತಿರ ನಡೆಯಿತು. ಸಧ್ಯಕ್ಕೆ ಗಂಭೀರ ಪರಿಸ್ಥಿತಿಯಾಗುವುದು ತಪ್ಪಿತು. ಆದರೂ ಅರ್ಧದಷ್ಟು ಆಹ್ವಾನಿತರು ಹಸಿದು ವಾಪಸ್ಸಾದರು. ಆದರೆ ಸರಕಾರಕ್ಕೆ ಜನತೆಗೆ ಮೋಸ ಮಾಡಲು ಕಂಟ್ರಾಕ್ಟರ್‌ಗಳಾದ, ಕಾವೇರಿ ಕಾಂಟಿನೆಂಟಲ್ ಮತ್ತು ಏರ್‌ಲೈನ್ಸ್ ಹೋಟೆಲ್ ಮಾಲೀಕರು ೨೦,೦೦೦ ಟಾಲಿ ಪ್ಯಾಕೆಟ್‌ಗಳನ್ನು ತಂದು ಲೆಕ್ಕ ಒದಗಿಸಲು ಪ್ರಯತ್ನ ಪಟ್ಟಿದ್ದನ್ನು ಅಲ್ಲಿದ್ದ ಅಧಿಕಾರಿಗಳಾದ ಶ್ರೀಮತಿ ನೀರಜಾ ರಾಜಕುಮಾರ್ ಮತ್ತು ಸಂಜಯ್‌ಕೌಲ್‌ರವರು ಪತ್ತೆ ಹಚ್ಚಿದ್ದು ಶ್ಲಾಘನೀಯ. ಈ ರೀತಿ ದ್ರೋಹ ಮಾಡಿದ, ಮೋಸ ಮಾಡಿದ, ಹೋಟೆಲ್ ಪ್ರೊಪ್ರೈಟರ್‌ಗಳ ಮೇಲೆ ಏನು ತುರ್ತು ಕ್ರಮ ಕೈಗೊಂಡಿದ್ದೀರಿ ಎಂಬ ಈ ಸಮಸ್ಯೆಯನ್ನು ಸದನದ ಮುಖಾಂತರ ಗ್ರಾಮಾಭಿವೃದ್ಧಿ ಸಚಿವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ಕಾರ್ಮಿಕ ಸಚಿವರು).—ಈ ಬಗ್ಗೆ ವಿಚಾರಣೆ ಮಾಡಿ, ವಿವರಗಳನ್ನು ಪಡೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

(ಳ) ಹೊನ್ನಾಳಿ ತಾಲ್ಲೂಕಿನ ಸಾಸಿವೆ ಹಳ್ಳಿಯಿಂದ ಸಿರಿಗೆರೆ ಮಾರ್ಗವಾಗಿ ರಾತ್ರಿವೇಳೆ ಬೆಂಗಳೂರಿಗೆ ಬಸ್ಸನ್ನು ಓಡಿಸುವುದು

ಶ್ರೀ ಡಿ.ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೇ ಹೊನ್ನಾಳಿ ತಾಲ್ಲೂಕಿನ ಸಾಸಿವೆ ಹಳ್ಳಿಯಿಂದ ಬಸವಪಟ್ಟಣ ಸಂತೆಬೆನ್ನೂರು, ಸಿರಿಗೆರೆ ಚಿತ್ರದುರ್ಗ ಮಾರ್ಗವಾಗಿ ಬೆಂಗಳೂರಿಗೆ ರಾತ್ರಿವೇಳೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸನ್ನು ಓಡಿಸುವ ಬಗ್ಗೆ ಹೊನ್ನಾಳಿ ಮತ್ತು ಚೆನ್ನಗಿರಿ ತಾಲ್ಲೂಕಿನ ಪ್ರಯಾಣಿಕರು ಕೆಲವಾರು ದಶಕಗಳಿಂದ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದರೂ ಇದುವರೆವಿಗೂ ಬೇಡಿಕೆ ಈಡೇರದೇ ಇರುವ ಬಗ್ಗೆ ಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸಾರಿಗೆ ಸಚಿವರಿಗೆ ವಿಷಯವನ್ನು ತಿಳಿಸಿ ಉತ್ತರ ತರಿಸಿಕೊಡುವ ವ್ಯವಸ್ಥೆ ಮಾಡಿಸುತ್ತೇನೆ.

(ಱ) ಮೈಸೂರಿನಲ್ಲಿರುವ ಟಿ.ವಿ. ಟ್ರಾನ್ಸ್‌ಮಿಟರ್‌ನ್ನು ೧೦ ಕಿಲೋವಾಟ್ಸ್‌ಗೆ ಏರಿಸುವುದು

ಶ್ರೀ ವೇದಾಂತ ಹಚ್ಮಿಗೆ.—ಮಾನ್ಯ ಅಧ್ಯಕ್ಷರೇ ಭಾರತ ಸರ್ಕಾರದ ಒನೇ ಯೋಜನೆಯಲ್ಲಿ ಶಿವಮೊಗ್ಗ ಮತ್ತು ಧಾರವಾಡಗಳಲ್ಲಿ ೧೦ ಕಿಲೋವಾಟ್ಸ್ ಟಿ.ವಿ. ಟ್ರಾನ್ಸ್‌ಮಿಟರ್‌ಗಳನ್ನು ಅಳವಡಿಸಲು ಕೇಂದ್ರ ಸರ್ಕಾರ ತೀರ್ಮಾನ ಕೈಗೊಂಡಿರುವುದಾಗಿ ಗೊತ್ತಾಗಿದೆ. ಈಗ ಮೈಸೂರು ನಗರದಲ್ಲಿರುವ ಟ್ರಾನ್ಸ್‌ಮಿಟರ್ ನಗರದ ಜನತೆಗೆ ಸರಿಯಾದ ರೀತಿಯಲ್ಲಿ ಪ್ರಸಾರ ಕಾರ್ಯದಲ್ಲಿ ಉಪಯೋಗವಾಗುತ್ತಿಲ್ಲ. ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವರಾದ ಶ್ರೀ ಆಜಿತ್ ಕುಮಾರ್ ಪೂಂಜರವರು ಮಡಿಕೇರಿಯಲ್ಲಿ ಕಳೆದ ತಿಂಗಳು ಕೊನೆಯಲ್ಲಿ ಎಲ್.ಪಿ.ಟಿ. ಟಿ.ವಿ. ಸ್ಟೇಷನ್ ತೆರೆಯುವುದಾಗಿ ತಿಳಿಸಿದ್ದು ಕೇಂದ್ರ ಸರ್ಕಾರವು ಈಗ ಮೈಸೂರಿನಲ್ಲಿರುವ ಟಿ.ವಿ. ಟ್ರಾನ್ಸ್‌ಮಿಟರ್ ಅನ್ನು ೧೦ ಕಿಲೋವಾಟ್‌ಗೆ ಏರಿಸಿ ಇದನ್ನು ಚಾಮುಂಡಿ ಬೆಟ್ಟದ ಮೇಲೆ ಸ್ಥಾಪಿಸಿ ಈಗಿರುವ ೪ ಚಾನಲ್ ಅನ್ನು ೬ ಚಾನಲ್‌ಗೆ ಬದಲಾಯಿಸಿ ಮೈಸೂರು ನಾಗರೀಕರಿಗೆ ಹಾಗೂ ಜಿಲ್ಲೆಯ ಜನರಿಗೆ ಟಿ.ವಿ. ಪ್ರಸಾರವು ಪೂರ್ಣವಾಗಿ ದೊರಕುವಂತೆ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಅಭಿಪ್ರಾಯ ಚೆನ್ನಾಗಿದೆ. ನಾನೂ ಕೂಡ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸುವುದಕ್ಕೆ ಸಿದ್ಧವಾಗಿದ್ದೇನೆ.